SL. No. : OP

# CCE PR

ಒಟ್ಟು ಪ್ರಶ್ನೆಗಳ ಸಂಖ್ಯೆ : 31 + 31 ]

Total No. of Questions : 31 + 31 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

**ಸಂಕೇತ ಸಂಖ್ಯೆ : 98-K**

**Code No. : 98-K**

## ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

## Subject : CARNATIC MUSIC / HINDUSTANI MUSIC — THEORY

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**(ಕನ್ನಡ ಭಾಷಾಂತರ / Kannada Version)**

**(ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು)**

ದಿನಾಂಕ : 21. 06. 2017 ]

ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 5-15 ರವರೆಗೆ ]

ಗರಿಷ್ಠ ಅಂಕಗಳು : 50 ]

[ Date : 21. 06. 2017

[ Time : 2-00 P.M. to 5-15 P.M.

[ Max. Marks : 50

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 31 + 31 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER

ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

CAREERINDIA
www.careerindia.com

CAREERINDIA



## (ಕರ್ನಾಟಕ ಸಂಗೀತ)

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ಈ ವಾದ್ಯವು ತಾಳವಾದ್ಯವಾಗಿದೆ

   (A) ವೀಣೆ (B) ಪಿಟೀಲು

   (C) ತಂಬೂರಿ (D) ಮೃದಂಗ

2. ಮಾಯಾಮಾಳವಗೌಳ ರಾಗದ ಶುದ್ಧ ಮಧ್ಯಮವನ್ನು ತೆಗೆದು ಪ್ರತಿಮಧ್ಯಮವನ್ನು ಹಾಕಿದರೆ ಈ ರಾಗವಾಗುತ್ತದೆ

   (A) ಖರಹರಪ್ರಿಯ (B) ಕಲ್ಯಾಣಿ

   (C) ಶಂಕರಾಭರಣ (D) ಕಾಮವರ್ಧಿನಿ

3. ಚತುರಶ್ರ ಜಾತಿ ಧ್ರುವ ತಾಳವು ಈ ಅಂಗಗಳನ್ನು ಹೊಂದಿದೆ

   (A) 1 1 0 0 (B) 1 0 1

   (C) 1 0 1 1 (D) 0 1

4. ಅಭ್ಯಾಸ ಗಾನದ ರಚನೆ ಇದಾಗಿದೆ

   (A) ಕೃತಿ (B) ತಿಲ್ಲಾನ

   (C) ತಾನವರ್ಣ (D) ಅಲಂಕಾರ

5. ಪಂಚಮ ಇಲ್ಲದ ರಾಗ ಇದಾಗಿದೆ

   (A) ಮೋಹನ (B) ಹಿಂದೋಳ

   (C) ಹಂಸಧ್ವನಿ (D) ಮಲಹರಿ

6. ಮಾಯಾಮಾಳವಗೌಳ ರಾಗದ ಮೇಳಕರ್ತ ಸಂಖ್ಯೆ

   (A) 22 (B) 15

   (C) 29 (D) 28

7. ಪಿಳ್ಳಾರಿ ಗೀತೆಗಳನ್ನು ಈ ರಾಗದಲ್ಲಿದೆ

   (A) ಬಿಲಹರಿ (B) ಮಲಹರಿ

   (C) ಮಾಯಾಮಾಳವಗೌಳ (D) ಮೋಹನ

www.careerindia.com

CAREERINDIA



8. ಖಂಡಜಾತಿಯು ಈ ತಾಳದ ಅಲಂಕಾರದಲ್ಲಿದೆ

   (A) ಏಕ ತಾಳ (B) ರೂಪಕ ತಾಳ

   (C) ಮಠ್ಯ ತಾಳ (D) ಅಟ ತಾಳ

9. ಒಂದು ಆವರ್ತದಲ್ಲಿ 7 ಅಕ್ಷರಗಳನ್ನು ಹೊಂದಿರುವ ತಾಳ

   (A) ಧ್ರುವ ತಾಳ (B) ಮಠ್ಯ ತಾಳ

   (C) ತ್ರಿಪುಟ ತಾಳ (D) ಝಂಪೆ ತಾಳ

10. ಇದು ಪ್ರತಿಮಧ್ಯಮ ರಾಗ

   (A) ಮಾಯಾಮಾಳವಗೌಳ (B) ಕಲ್ಯಾಣಿ

   (C) ಶಂಕರಾಭರಣ (D) ಖರಹರಪ್ರಿಯ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** 10 × 1 = 10

11. ಮೋಹನ ರಾಗವನ್ನು ಹಿಂದೂಸ್ಥಾನಿ ಸಂಗೀತದಲ್ಲಿ ಏನೆಂದು ಕರೆಯಲಾಗಿದೆ ?

12. ಸ್ವರಗಳ ಕ್ರಮವಾದ ಏರುವಿಕೆಗೆ ಏನೆಂದು ಹೆಸರು ?

13. ನಿಷಾದವು ಯಾವ ಸ್ವರ ?

14. ಮಂದ್ರಸ್ಥಾಯಿಯನ್ನು ಬರವಣಿಗೆಯಲ್ಲಿ ಸೂಚಿಸಲು ಎಲ್ಲಿ ಚುಕ್ಕೆಗಳನ್ನು ಇಡಲಾಗುತ್ತದೆ ?

15. ಔಢವ ರಾಗ ಎಂದರೇನು ?

16. ಒಂದು ಚರ್ಮ ವಾದ್ಯವನ್ನು ಹೆಸರಿಸಿ.

17. ರೂಪಕ ತಾಳದಲ್ಲಿ ಒಂದು ದ್ರುತವನ್ನು ತೆಗೆದರೆ ಯಾವ ತಾಳವಾಗುತ್ತದೆ ?

18. ಷಡ್ಜ, ಪಂಚಮಗಳನ್ನು ಯಾವ ಸ್ವರಗಳೆನ್ನುತ್ತಾರೆ ?

19. ಆಧಾರ ಶೃತಿಯನ್ನು ಯಾವ ಸ್ವರವೆಂದು ಕರೆಯುತ್ತಾರೆ ?

20. ಅನುದ್ರುತವು ಯಾವ ತಾಳದಲ್ಲಿ ಬರುತ್ತದೆ ?

www.careerindia.com

CAREERINDIA



III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** 9 × 2 = 18

21. ಚತುರಶ್ರ ಜಾತಿ ಮತ್ತು ಮಿಶ್ರ ಜಾತಿ ಇವುಗಳ ಪರಸ್ಪರ ವ್ಯತ್ಯಾಸವನ್ನು ತಿಳಿಸಿ.

22. ಎರಡು ಉಪಾಂಗ ರಾಗಗಳು ಹಾಗೂ ಎರಡು ಭಾಷಾಂಗ ರಾಗಗಳನ್ನು ಹೆಸರಿಸಿ.

23. ಶಂಕರಾಭರಣ ರಾಗದ ಲಕ್ಷಣವನ್ನು ಬರೆಯಿರಿ.

24. ಜನಕ ರಾಗ ಎಂದರೇನು ? ಉದಾಹರಣೆ ಕೊಡಿ.

25. ದೈವತ ಮತ್ತು ನಿಷಾದಗಳ ಸ್ವರ ಪ್ರಭೇದಗಳನ್ನು ತಿಳಿಸಿ.

26. ಚತುರಶ್ರ ಜಾತಿ ಧ್ರುವ ತಾಳದ ಅಲಂಕಾರವನ್ನು ಸಂಗೀತ ಲಿಪಿಯೊಂದಿಗೆ ಬರೆಯಿರಿ. (ನಾಲ್ಕು ಆವರ್ತಗಳು ಮಾತ್ರ)

27. ಅಭ್ಯಾಸಗಾನದ ಎರಡು ರಚನೆಗಳು ಹಾಗೂ ಸಭಾಗಾನದ ಎರಡು ರಚನೆಗಳನ್ನು ಹೆಸರಿಸಿ.

28. ಸ್ವರಗಳಲ್ಲಿ ಎಷ್ಟು ವಿಧ ? ಯಾವುವು ? ವಿವರಿಸಿ.

29. ರೂಪಕ ತಾಳ ಮತ್ತು ತ್ರಿಪುಟ ತಾಳ ಇವುಗಳಿಗಿರುವ ಪರಸ್ಪರ ವ್ಯತ್ಯಾಸಗಳನ್ನು ತಿಳಿಸಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :** 2 × 6 = 12

30. ಸಪ್ತ ತಾಳಗಳ ಹೆಸರು, ಅಂಗಗಳು ಮತ್ತು ಅಕ್ಷರಗಳನ್ನು ತಿಳಿಸಿ.

31. 'ಕುಂದಗೌರ' ಗೀತೆಯನ್ನು ಸಂಗೀತ ಲಿಪಿಯೊಂದಿಗೆ ಬರೆಯಿರಿ. (ಆರು ಆವರ್ತಗಳು ಮಾತ್ರ)

www.careerindia.com

CAREERINDIA



# (ಹಿಂದೂಸ್ಥಾನಿ ಸಂಗೀತ)

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 10 × 1 = 10

1. ಹಿಂದೂಸ್ಥಾನಿ ಸಂಗೀತ ಥಾಟ್‌ಗಳು
   (A) ಹತ್ತು (B) ಎರಡು
   (C) ನಾಲ್ಕು (D) ಆರು

2. ಶ್ರೀ ವೀರೇಶ್ವರ ಪುಣ್ಯಾಶ್ರಮವಿರುವುದು
   (A) ಧಾರವಾಡದಲ್ಲಿ (B) ಗದಗದಲ್ಲಿ
   (C) ಹುಬ್ಬಳ್ಳಿಯಲ್ಲಿ (D) ಬೆಳಗಾವಿಯಲ್ಲಿ

3. 'ಗಿರಿಧರನಾಗ್' ಅಂಕಿತ
   (A) ಮೀರಾಬಾಯಿ (B) ಸೂರದಾಸ್
   (C) ಕಬೀರದಾಸ್ (D) ಬ್ರಹ್ಮಾನಂದ

4. ಸ್ವರಗಳ ಕೆಳಗೆ ಚುಕ್ಕೆ ಇದ್ದಲ್ಲಿ
   (A) ತಾರ ಸಪ್ತಕ (B) ಮಂದ್ರ ಸಪ್ತಕ
   (C) ಮಧ್ಯ ಸಪ್ತಕ (D) ಶುದ್ಧ ಸ್ವರ

5. ಲಯದ ಪ್ರಕಾರಗಳು
   (A) ಮೂರು (B) ಎರಡು
   (C) ಒಂದು (D) ನಾಲ್ಕು

6. ತ್ರಿತಾಳದ ಒಂದು ಭಾಗದಲ್ಲಿರುವ ಮಾತ್ರಾಗಳು
   (A) ನಾಲ್ಕು ಮಾತ್ರಾಗಳು (B) ಎರಡು ಮಾತ್ರಾಗಳು
   (C) ಆರು ಮಾತ್ರಾಗಳು (D) ಹದಿನಾರು ಮಾತ್ರಾಗಳು

7. ದುರ್ಗಾ ರಾಗದ ಥಾಟ್
   (A) ಅಸಾವರಿ (B) ತೋಡಿ
   (C) ಬಿಲಾವಲ (D) ಖಮಾಜ

www.careerindia.com

CAREERINDIA



8. ಭೀಮಪಲಾಸ ರಾಗದ ಕೋಮಲ ಸ್ವರಗಳು

(A) ರೆ, ಧ (B) ಗ, ನಿ

(C) ಪ, ಧ (D) ಸಾ, ಮ

9. ಭೈರವಿ ರಾಗದ ಥಾಟ್

(A) ಭೈರವ್ (B) ಭೈರವಿ

(C) ಕಲ್ಯಾಣ (D) ಪೂರ್ವಿ

10. ಏಕತಾಳದ ಮೊದಲನೇ ಹುಸಿಯು

(A) ಏಳನೇ ಮಾತ್ರಾ (B) ಮೂರನೇ ಮಾತ್ರಾ

(C) ಒಂಭತ್ತನೇ ಮಾತ್ರಾ (D) ಹನ್ನೊಂದನೇ ಮಾತ್ರಾ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** $10 \times 1 = 10$

11. ಪಂಡಿತ್ ವಿ.ದಿ. ಭಾತಖಂಡೆಯವರ ಪ್ರಕಾರ 'ಸಮ್' ಚಿಹ್ನೆ ಯಾವುದು ?

12. ಸ್ವರಗಳ ಮೇಲೆ ಚುಕ್ಕೆ ಇದ್ದಲ್ಲಿ ಅದು ಯಾವ ಸ್ವರವಾಗಿರುತ್ತದೆ ?

13. ಕಾಫಿ ರಾಗದಲ್ಲಿ ಯಾವ ಸ್ವರಗಳು ಕೋಮಲವಾಗಿರುತ್ತವೆ ?

14. ಭೂಪ ರಾಗದ ಜಾತಿ ಯಾವುದು ?

15. ಭೀಮಪಲಾಸ್ ರಾಗದ ಗಾಯನ ಸಮಯ ತಿಳಿಸಿ.

16. ವಿಕೃತಿ ಸ್ವರಗಳ ಪ್ರಕಾರಗಳನ್ನು ಹೆಸರಿಸಿ.

17. 'ಆರೋಹ' ಎಂದರೇನು ?

18. 'ಸ್ಥಾಯಿ' ಎಂದರೇನು ?

19. 'ಅಂತರಾ' ಎಂದರೇನು ?

20. 'ಸಪ್ತಕ' ಎಂದರೇನು ?

www.careerindia.com

CAREERINDIA



III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** 9 × 2 = 18

21. 'ಸಂಗೀತ' ಎಂದರೇನು ?

22. ಸ್ವರಗಳು ತಮ್ಮ ಸ್ಥಾನದಿಂದ ಬದಲಾವಣೆ ಹೊಂದಿದ್ದಲ್ಲಿ ಆ ಸ್ವರಗಳು ಯಾವುವು ? ಅವುಗಳನ್ನು ಹೆಸರಿಸಿ.

23. ಪಂಡಿತ್ ವಿ.ದಿ. ಭಾತಖಂಡೆಯವರ ಸ್ವರಲಿಪಿ ಪದ್ಧತಿಯ ಎರಡು ಅಂಶಗಳನ್ನು ಬರೆಯಿರಿ.

24. ಕೇರವಾ ತಾಳದ ಬೋಲ್ ಅನ್ನು ಚಿಹ್ನೆ ಸಹಿತ ಬರೆಯಿರಿ.

25. 'ಸ್ವರ' ಎಂದರೇನು ? ಎಷ್ಟು ಪ್ರಕಾರಗಳು ? ಅವುಗಳನ್ನು ಹೆಸರಿಸಿ.

26. ದಾದರಾ ತಾಳದ ಮಾತ್ರಾಗಳೆಷ್ಟು ? ಬೋಲ್ ಬರೆಯಿರಿ.

27. ಭಾಗೇಶ್ರೀ ರಾಗದ ಆರೋಹಣ–ಅವರೋಹಣ ಬರೆಯಿರಿ.

28. 'ಲಕ್ಷಣಗೀತೆ' ಎಂದರೇನು ?

29. 'ಖಯಾಲ್' ಎಂದರೇನು ?

IV. **ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :** 2 × 6 = 12

30. ಹಿಂದೂಸ್ಥಾನಿ ಸಂಗೀತ ಹಾಗೂ ಕರ್ನಾಟಕ ಸಂಗೀತ ಪದ್ಧತಿಗಳಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ತಿಳಿಸಿ. (ಯಾವುದದಾರೂ ಮೂರು ವ್ಯತ್ಯಾಸಗಳು)

31. ಝಪ್ತಾಲದ ವಿವರಣೆ ಬರೆದು, ಚಿಹ್ನೆ, ಮಾತ್ರಾ, ಬೋಲ್ ಭಾಗವನ್ನು ಬರೆಯಿರಿ.

www.careerindia.com

www.careerindia.com